(*d*) the reasons for the inordinate delay in submitting their recommendations in the light of the fact a similar official committee appointed to recommend the revision of salaries for all the departments of Government took only 13 days to make their recommendations ?

A.—Sri ANNA RAO GANAMUKHI (Minister for Education).—

(*a*) The Committees were constituted on 26th June 1957. The first Committee met once and the second, twice.

(*b*) Yes.

(*c*) & (*d*) Do not arise in view of reply to clause (*b*) above.

Leave of Absence.

Mr. SPEAKER.—I have received a letter from Sri V. S. Patil, a member of this House, requesting leave of absence from this House for a period of one month. He says that there have been certain serious injuries and consequently he is laid up in a hospital at Belgaum. So, is it the pleasure of this House that permission be granted to Sri V. S. Patil to remain absent from all meetings of the Assembly for a period of one month ?

The House gave the necessary permission.

Mr. SPEAKER.—The necessary permission is granted.

Members' Representation.

Sri F. H. MOHSIN (Hubli City).—Sir, I have tabled so many questions for answers about a year ago and I have not been able to receive the replies from the Government. I find that the ex-Ministers like Sri Baliga and Sri R. M. Patil have tabled questions on 10th October 1958 and 29th May 1958 and those questions are being replied. I would like to know why this di crimination is being made between ex-Ministers and other members.

ಅಧ್ಯಕ್ಷರು.—ನರ್ಕಾರದಿಂದ ಉತ್ತರಗಳೇ ಬಂದಿಲ್ಲ ವೆಂದಲ್ಲ. ಕೆಲವಕ್ಕೆ ಉತ್ತರಗಳು ಬಂದಿವೆ. ಹೇಗೆ ಹೇಗೆ ಬರುತ್ತವೋ ಹಾಗೆ ಜೋಡಿಸುತ್ತೇವೆ. ಸುಮಾರು 800 ಪ್ರಶ್ನೆಗಳಿಗೆ ಉತ್ತರಗಳು ಬಂದಿವೆ. ಈಹೊತ್ತು, 30 ಪ್ರಶ್ನೆಗಳನ್ನು ತೆಗೆದುಕೊಂಡಿದ್ದೇನೆ. ದಿನಕ್ಕೆ 25 ಪ್ರಶ್ನೆಗಳನ್ನು ತೆಗೆದುಕೊಳ್ಳುತ್ತಿದ್ದೆವು. ನಿಮ್ಮ ಪ್ರಶ್ನೆಗಳಿಗೆ ನರ್ಕಾರದಿಂದ ಉತ್ತರ ಬಂದಿಲ್ಲ ವೆಂದು ಹೇಳುವುದಕ್ಕಾಗುವುದಿಲ್ಲ ; ಅವರು ಕಳುಹಿಸಿರ ಬಹುದು, ನೋಡುತ್ತೇನೆ. ಉತ್ತರಗಳು ಬಂದಹಾಗೆ ಮುದ್ರಣ ಮಾಡಿಸುತ್ತಿದ್ದೇನೆ. ನಿಮ್ಮದೂ ಬಂದಿದೆ.

ಶ್ರೀ ಜಿ. ಎಸ್. ಪುಟ್ಟಣ್ಣ (ತುಮಕೂರು).—ನಾನು ತಾರೀಖು 22ನೇ ಮೇ 1957 ರಲ್ಲಿ ಕಳುಹಿಸಿದ್ದ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ, ಸೆಪ್ಟಂಬರ್ 16ರಲ್ಲಿ ಕಳುಹಿಸಿದ್ದಕ್ಕೆ ಉತ್ತರ ಈಗ ಬಂದಿದೆ.

ಅಧ್ಯಕ್ಷರು.—ಇನ್ನುಮೇಲೆ ಹೊಸ ರೂಲ್ಸ್ ಪ್ರಕಾರ ಹಳೆಯ ಪ್ರಶ್ನೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ.

Sri C. M. ARUMUGHAM (Kolar Gold Fields).—Under article 194 of the Constitution of India I have sent a motion.

Mr. SPEAKER.—If you want my ruling I will give it today. Before that I would like to hear your views. That is why you and I will meet together for some time. I do not want to give a ruling before I hear you. If the member can enlighten me I would like to hear him.

Sri G. VENKATAI GOWDA (Palaiyam).—I have taken some objections with regard to the notifications placed by the Government on the Table of the House. With regard to the notification that contravenes the provisions of the Cinematograph Act, I wish to sa it has not been brought before the House.

Mr. SPEAKER.—Those objections have been sent to the Government. I am awaiting their reply. I will be able to give a ruling in this respect by the 1st or 2nd of next month.

PAPERS LAID ON THE TABLE.

Sri B. D. JATTI (Chief Minister).—Sir, I lay on the Table—

(i) Notification No. 27 (2) MVT 58, dated 3rd April 1958.

(ii) Notification No. 126 MVT 57 dated 19th April 1958.

(iii) Notification No. HD 5 MVT 57 dated 31st October 1958 issued under section 16 of the Motor Vehicles Taxation Act 1957,

Sri T. SUBRAMANYA (Minister for Law, Labour and Local Self-Government).—Sir, I lay on the Table a statement in connection with Question No. 2818 given notice of by Sri K. P. Gadag, regarding Ports in Mysore State.

Election to the Committee on Government Assurance.

Sri B. D. JATTI (Leader of the House).—Sir I move:

"That this Assembly do proceed to elect 8 members to the Committee on Government Assurance in accordance with sub-rule (1) of rule 267 of the Rules of Procedure and Conduct of Business in the Mysore Legislative Assembly."

Mr. SPEAKER.—The question is:

"That this Assembly do proceed to elect 8 members to the Committee on Government Assurance in accordance with sub-rule (1) of rule 267 of the Rules of Procedure and Conduct of Business in the Mysore Legislative Assembly."

The motion was adopted.

Mr. SPEAKER.—The programme will follow.

FOOD SITUATION IN THE STATE.

(Discussion continued).

ಅಧ್ಯಕ್ಷರು.—ಇವತ್ತು ಐದೂವರೆ ಗಂಟೆಯವರೆಗೆ ಆಹಾರದ ವಿಷಯದಮೇಲೆ ಚರ್ಚೆ ನಡೆಯುತ್ತದೆ. ಆಮೇಲೆ ಅರ್ಧಗಂಟೆಕಾಲ ಮೈಸೂರು ನಾಗಿ ಕಲ್ಚರರ್ ಲೋನ್ಸ್ ಬಿಲ್, 1958, ಇದರ ಚರ್ಚೆಗೆ ಕಾಲಬೇಕಾಗುತ್ತದೆ. ಐದೂವರೆಗೆ ಆಹಾರದ ಚರ್ಚೆ ಮುಗಿಯುವುದಾದ್ದರಿಂದ ಕಾಲ ಪರಿಮಿತಿ ಗೊತ್ತು ಮಾಡದಿದ್ದರೆ ಎಲ್ಲರಿಗೂ ಅವಕಾಶ ಸಿಕ್ಕುವುದು ಕಷ್ಟವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರಿಗೂ 15 ನಿಮಿಷಗಳು ಅವಕಾಶ ಗೊತ್ತುಮಾಡಬೇಕೆಂದಿದ್ದೇನೆ. ಅದಕ್ಕಿಂತ ಹೆಚ್ಚಾಗಿ ಮಾತನಾಡಬಾರದು. ಬೇಕಾದರೆ ಉಪಹಾರಕ್ಕಾಗಿ ವಿನಿಯೋಗಿಸುವ ಅರ್ಧಗಂಟೆ ಕಾಲವನ್ನು ಈ ದಿವಸ ನಿಲ್ಲಿಸೋಣ.

ಶ್ರೀ ಟಿ. ಎಸ್. ಮೂಡಲಗಿರಿಗೌಡ (ಕುಣಿಗಲ್).—ಆಹಾರದ ಚರ್ಚೆಯ ಸಂಬಂಧದಲ್ಲಿ ಅನೇಕ ವಿಷಯಗಳ ಮೇಲೆ ಮಾತನಾಡಬೇಕಾಗಿದೆ. ಜಿಲ್ಲಾವಾರು ಮತ್ತು ತಾಲ್ಲೂಕುವಾರು ಕಾರ್ಪಸ್ಟ್ಯೂಯೆನ್ಸಿಗೆ ಸಂಬಂಧಪಟ್ಟಂತಾಗಿ ಅನೇಕರು ಮಾತನಾಡುವವರಿದ್ದಾರೆ. ತಾವು ಯಾರು ಮಾತನಾಡಬೇಕೆಂಬುದನ್ನು ನಿರ್ಣಯ ಮಾಡುವಾಗ ಜಿಲ್ಲಾವಾರು ಪ್ರಾತಿನಿಧ್ಯಕ್ಕೆ ಗಮನ ಕೊಡುವುದು ಸರಿಯೆಂದು ಕಾಣುತ್ತದೆ. ನಾವು ಇದುವರೆಗೆ ನೋಡಿದ್ದರಲ್ಲಿ ಒಂದೊಂದು ದಿವಸ ಒಂದೊಂದು ತರಹ ರೀತಿನೀತಿಯನ್ನನುಸರಿಸಲಾಗುತ್ತಿದೆ.

Mr. SPEAKER.—I shall keep that in mind.

*ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯ್ಕನಹಳ್ಳಿ).—ಮಾನ್ಯ ಅಧ್ಯಕ್ಷರೆ, ಆಹಾರದ ವಿಷಯ ದೇಶದಲ್ಲಿ ಬಹಳ ಮುಖ್ಯವಾದುದು. ಆದರೆ ಸರ್ಕಾರ ಅನೇಕ ಬಾಬುಗಳ ಬಗ್ಗೆ ವಿವರಣೆ ಕೊಟ್ಟ ರೀತಿಯನ್ನು ನೋಡಿದರೆ ಆಹಾರದ ಉತ್ಪತ್ತಿಯ ವಿಷಯದಲ್ಲಿ ಅದು ಬಹಳ ಮಟ್ಟಿಗೆ ವಿಫಲವಾಗಿದೆಯೆಂದು ಹೇಳಬಹುದು. ಇದಕ್ಕೆ ಸರ್ಕಾರವೇ ಕಾರಣವೋ ಅಥವಾ ಯೋಜನೆ ಸರಿಯಿಲ್ಲವೋ ಅಥವಾ ಜನತೆ ಅದಕ್ಕೆ ಸಾಕಾದಷ್ಟು ಸಹಕಾರ ಮಾಡುತ್ತಿಲ್ಲವೋ ಎಂದು ಅನುಮಾನ ಬರುತ್ತದೆ. ನಿಜವಾಗಿಯೂ ನೋಡಿದ ಪಕ್ಷದಲ್ಲಿ ಇಂದಿನ ಸ್ಥಿತಿ ಏನಾಗಿದೆಯೆಂದರೆ ಹಿಂದೆ ಸಹಸ್ರಾರು ವರ್ಷಗಳಿಂದ ದೇಶದಲ್ಲಿ ಎಂಥ ಕ್ಷಾಮ ಬಂದರೂ, ಯುದ್ಧ ಅಥವಾ ಪ್ರಕೃತಿ ಏಕೋಪ ಉಂಟಾದರೂ ಕೂಡ ಆಹಾರ ಪದಾರ್ಥಗಳ ಧಾರಣೆ ಈಗಿನಷ್ಟು ತುಟ್ಟಿಯಾಗಿರಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಯುದ್ಧಕಾಲದಲ್ಲೂ ಕೂಡ ರೂಪಾಯಿಗೆ ಎರಡು ಎರಡೂವರೆ ಸೇರು ಅಕ್ಕಿ ಮಾರಿದರೆ ಬ್ಲಾಕ್ ಮಾರ್ಕೆಟ್ ಎಂದು ಹೇಳುತ್ತಿದ್ದರು. ಅದು ಹೋಗಿ ಈಗ ರೂಪಾಯಿಗೆ ಒಂದೂವರೆ ಸೇರು ಅಕ್ಕಿ, ಎರಡೂಮುಕ್ಕಾಲು ಅಥವಾ ಮೂರು ಸೇರು ರಾಗಿ, ಒಂದು ರೂಪಾಯಿ ಎರಡಾಣೆಗೆ ಒಂದು ಸೇರು ಬೇಳೆ ಮಾರಾಟವಾಗುತ್ತಿದೆ. ಹೀಗೆ ಧಾರಣೆ ಹತೋಟಿ ಮೀರಿ ಬಡವರಿಗೆ ಬಹಳ ತೊಂದರೆಯಾಗುತ್ತಿದೆ. ಈಗ ನಮ್ಮ ದೇಶದಲ್ಲಿ ಆಹಾರದ ಉತ್ಪತ್ತಿ ಎಷ್ಟರಮಟ್ಟಿಗೆ ಆಗುತ್ತಿದೆಯೆಂದರೆ ಅದು ನಿಜವಾಗಿಯೂ ಕೂಡ ಬಹಳ ಅವಮಾನಕರವಾದ ವಿಚಾರವೆಂದು ಹೇಳಬೇಕಾಗುತ್ತದೆ. ಏಕೆಂದರೆ ಇಡೀ ಭರತ ಖಂಡಕ್ಕೇ ಒಂದು ಯೋಜನೆಯಿದೆ. ಅದರಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ಶೇಕಡ ಇಷ್ಟು ಹೆಚ್ಚು ಆಹಾರ ಉತ್ಪತ್ತಿಯಾಗಬೇಕೆಂಬ ಒಂದು ಗುರಿಯಿದೆ.

2-30 P.M.

ಪೊದಲನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ನಮ್ಮ ದೇಶದಲ್ಲಿ ಆಗಿರತಕ್ಕ ಆಹಾರ ಉತ್ಪತ್ತಿಯನ್ನು ನೋಡಿದರೆ ಅದು ಬಹಳ ನಿರಾಶಾದಾಯಕವಾಗಿದೆ. ಇದಕ್ಕೆ ಸರಕಾರವೇ ಮುಖ್ಯ ಕಾರಣವಾಗಿದೆ ಸರಕಾರದವರ ಹತ್ತಿರ ನುಮಾರು 74 ಲಕ್ಷ ಎಕರೆ ಜಮೀನುಇದೆ ಎಂದು ಹೇಳುತ್ತಾರೆ. ಈ ಜಮೀನು ಸಾಗುವಳಿಗೆ ರಾಯಿಪ್ ಆಗಿದೆ. ಏತಕ್ಕೋಸ್ಕರ ಇದನ್ನು ಸಾಗುವಳಿಗೆ ಕೊಟ್ಟಿಲ್ಲ ! ಆಹಾರ ಉತ್ಪತ್ತಿ ಮಾಡುವದಕ್ಕೆ ಈ ಜಮೀನು ಕೊಟ್ಟು ಏತಕ್ಕಾಗಿ ಪ್ರಯತ್ನ ಮಾಡುತ್ತಿಲ್ಲವೆಂದು ನಾನು ಕೇಳುತ್ತೇನೆ. ಪ್ರತಿಯೊಂದು ತಾಲ್ಲೂಕಿಗೆ ಎಂಟು ಸಾವಿರ ಎಕರೆ ಭೂಮಿಯನ್ನು ಸಾಗುವಳಿಗೆ ಕೊಟಿದ್ದರೆ ಒಟ್ಟು 16 ಲಕ್ಷ ಎಕರೆ ಭೂಮಿ ಸಾಗುವಳಿಯಾಗುತ್ತಿತ್ತು. ಕನಿಷ್ಟ ಹತ್ತು ಲಕ್ಷ ಎಕರೆ ಭೂಮಿಯನ್ನಾದರೂ ಸಾಗುವಳಿಗೆ ಕೊಡಬೇಕಾಗಿತ್ತು, ಒಂದು ಎಕರೆ ಭೂಮಿಯಲ್ಲಿ ಒಂದು ಪಲ್ಲಾ ಅಕ್ಕಿಯನ್ನು ಬೆಳೆದಿದ್ದರೆ ಹತ್ತು ಲಕ್ಷ ಪಲ್ಲಾ ಹೆಚ್ಚು ಬೆಳೆಯಬಹುದಾಗಿತ್ತು. ಮಳೆ ಕಡಿಮೆಯಾದ್ದರಿಂದ ಉತ್ಪತ್ತಿ ಕಡಿಮೆಯಾಗಿದೆಯೆಂದು ಹೇಳುತ್ತಾರೆ ಭೂಸುಧಾರಣೆಯ ನೆಪದಿಂದ ಜಮೀನು